# ಚೈಲ್ಡ್‌ಲೈನ್ ಮಂಗಳೂರು–1098

## “ತೆರೆದ ಮನೆ” ಕಾರ್ಯಕ್ರಮದ ವರದಿ

ಮಕ್ಕಳ ಸಹಾಯವಾಣಿ ಮಂಗಳೂರು–1098 ಇವರ ನೇತೃತ್ವದಲ್ಲಿ ತೆರೆದ ಮನೆ ಕಾರ್ಯಕ್ರಮವು ದಿನಾಂಕ: 20/07/2016ರಂದು ಶಕ್ತಿನಗರದಲ್ಲಿರುವ ಶಕ್ತಿ ಫ್ರೆಂಡ್ಸ್ ಕ್ಲಬ್‌ನ ಅಂಗನವಾಡಿ ಕೇಂದ್ರದಲ್ಲಿ ನಡೆಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಮಂಗಳೂರು ಗ್ರಾಮಾಂತರ ಠಾಣೆಯ ಪೋಲಿಸ್ ಅಧಿಕಾರಿಯಾಗಿರುವ ಶ್ರೀ. ಕುಶಾಲಪ್ಪ ಗೌಡ ಮತ್ತು ಶ್ರೀಮತಿ.ಸತ್ಯವತಿ ಹಾಗೂ ಪುಟಾಣಿ ಮಕ್ಕಳು ಚೈಲ್ಡ್‌ಲೈನ್–1098ನ ಬಿತ್ತಿ ಪತ್ರವನ್ನು ಪ್ರದರ್ಶಿಸುವ ಮೂಲಕ ಉದ್ಘಾಟಿಸಲಾಯಿತು.





ಮಂಗಳೂರು ಚೈಲ್ಡ್‌ಲೈನ್ 1098ನ ಕೇಂದ್ರ ಸಂಯೋಜಕರಾದ ಸಂಪತ್ ಕಟ್ಟಿಯವರು ಪ್ರಾಸ್ತವಿಕ ಮಾತುಗಳನ್ನಾಡುತ್ತಾ ತೊಂದರೆಯಲ್ಲಿರುವ ಮಕ್ಕಳ ತುರ್ತು ರಕ್ಷಣೆಗಾಗಿ ದಿನದ 24 ಗಂಟೆಗಳ ಹಗಲು ಮತ್ತು ರಾತ್ರಿ ನಿರಂತರ ಸೇವೆಯನ್ನು ಒದಗಿಸುವಂತಹ ಏಕೈಕ ತುರ್ತು ಸೇವೆಯಾಗಿದೆ ಮತ್ತು ಯಾವುದೆ ಮಗುವಿಗೆ ಸಮಸ್ಯೆ ಆದಲ್ಲಿ ಚೈಲ್ಡ್‌ಲೈನ್–1098ಕ್ಕೆ ಕರೆ ಮಾಡಿದಲ್ಲಿ ಅಂತಹ ಸಂದರ್ಭದಲ್ಲಿ 60 ನಿಮಿಷದೊಳಗೆ ಮಗುವಿನ ರಕ್ಷಣೆಗೆ ಧಾವಿಸುತ್ತದೆ. ಚೈಲ್ಡ್‌ಲೈನ್–1098ಕ್ಕೆ ಕರೆ ಮಾಡಿದ ಯಾವುದೇ ವ್ಯಕ್ತಿಯ ಹೆಸರನ್ನು ಗೌಪ್ಯವಾಗಿಟ್ಟುಕೊಳ್ಳುವ ಮುಖಾಂತರ ನಮ್ಮ ಈ ಒಂದು ಚೈಲ್ಡ್‌ಲೈನ್–1098 ಕಾರ್ಯವನ್ನು ನಿರ್ವಹಿಸುತ್ತದೆ ಎಂದರು.

ಮಂಗಳೂರು ಗ್ರಾಮಾಂತರ ಠಾಣೆಯ ಪೋಲಿಸ್ ಅಧಿಕಾರಿಯಾಗಿರುವ ಶ್ರೀ.ಕುಶಾಲಪ್ಪ ಗೌಡ'ರವರು ಮಾತನಾಡುತ್ತಾ ಸುತ್ತಮುತ್ತಲಿನ ಸ್ಥಳಗಳಲ್ಲಿ ಮಕ್ಕಳ ಮೇಲೆ ಯಾವುದೇ ರೀತಿಯ ದೌರ್ಜನ್ಯಗಳು ನಡೆಯದಂತೆ ಮನೆಯಲ್ಲಿ ಹೆತ್ತವರು ತಮ್ಮ ಮಕ್ಕಳ ಬಗ್ಗೆ ಮುಂಜಾಗ್ರತೆ ಕ್ರಮ ವಹಿಸಬೇಕು. ಸುರಕ್ಷಿತ ಮತ್ತು ಅಸುರಕ್ಷಿತ ಸ್ಪರ್ಶಗಳ ಬಗ್ಗೆ ತಿಳುವಳಿಕೆ ನೀಡಬೇಕು. ಪೋಲಿಸ್ ಅಧಿಕಾರಿಗಳು ಇವಾಗ ಮಕ್ಕಳ ಸ್ನೇಹಿಯಾಗಿದ್ದು, ಮಕ್ಕಳಿಗೆ ಯಾವುದೇ ರೀತಿಯ ಸಮಸ್ಯೆ ಉಂಟಾದಾಗ ಮಕ್ಕಳು ಭಯಮುಕ್ತರಾಗಿ ಪೋಲಿಸ್ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಬಹುದು ಹಾಗೂ ಇತ್ತೀಚಿನ ಘಟನೆಗಳನ್ನು ಗಮನಿಸಿದಾಗ ಅಪ್ರಾಪ್ತ ಬಾಲಕರು ವಾಹನಗಳನ್ನು ಚಲಾಯಿಸುತ್ತಿತರುವುದರಿಂದ ಅಪಘಾತದಂತಹ ಘಟನೆಗಳು ಹೆಚ್ಚು ಸಂಭವಿಸುತ್ತಿವೆ ಹಾಗಾಗಿ ಹೆತ್ತವರು ತಮ್ಮ ಅಪ್ರಾಪ್ತ ಮಕ್ಕಳಿಗೆ ಯಾವುದೇ ರೀತಿಯ ವಾಹನಗಳನ್ನು ಚಲಾಯಿಸುವುದಕ್ಕೆ ಅವಕಾಶ ಕೊಡಬಾರದು ಮತ್ತು ಮಕ್ಕಳು ಮಾದಕ ದ್ರವ್ಯ ವ್ಯಸನಗಳಿಗೆ ಒಳಗಾಗದಂತೆ ಹೆತ್ತವರು ಗಮನ ಕೊಡಬೇಕು ಒಂದು ವೇಳೆ ಎಲ್ಲಿಯಾದರು ಮಾದಕ ದ್ರವ್ಯ ಮಾರಾಟ/ಸಾಗಾಟದಂತಹ ಮಹಿತಿಗಳು ಸಿಕ್ಕಿದಲ್ಲಿ ಪೋಲಿಸ ಠಾಣೆಯನ್ನು ಯಾವೂದೇ ಭಯವಿಲ್ಲದೆ ಪೋಲಿಸ ಇಲಾಖೆಯನ್ನು ಸಂಪರ್ಕಿಸುವಂತೆ ಸಭೆಯಲ್ಲಿ ತಿಳಿಸಿದರು.





ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖಾ ಅಧಿಕಾರಿಯಾದ ಶ್ರೀಮತಿ.ಜ್ಯೋತಿ.ಕೆ. ಇವರು ಮಾತನಾಡುತ್ತಾ ಸಾಂಕ್ರಾಮಿಕ ರೋಗಗಳಾದ ಮಲೇರಿಯಾ, ಡೆಂಗ್ಯೂ, ಚಿಕನ್ ಗುನ್ಯ, ಇತ್ಯಾದಿ ರೋಗಗಳು ಹರಡದಂತೆ ನಮ್ಮ ಸುತ್ತ ಮುತ್ತಲಿನಲ್ಲಿ ಸೊಳ್ಳೆ ಬತ್ತಿಯನ್ನು ಅಥವಾ ತೆಂಗಿನ ನಾರಿನ ಚಿಪ್ಪನ್ನು ಉರಿಸುವ ಮೂಲಕ ಸ್ವಲ್ಪ ಮಟ್ಟಿಗೆ ಕಡಿಮೆಮಾಡುವುದರೊಂದಿಗೆ ಜಾಗೃತಿ ಮಹಿಸಬೇಕು ಹಾಗೂ ಅದರ ಜೊತೆ ಎಳನೀರಿನ ಚಿಪ್ಪನ್ನು ಕವಚಿಹಾಕುವ ಮುಖೇನ ಅದರಲ್ಲಿ ನೀರು ನಿಲ್ಲದಂತೆ ಮತ್ತು ಸೊಳ್ಳೆ ಉತ್ಪತ್ತಿಯಾಗದಂತೆ ನಮ್ಮ ಸುತ್ತಮುತ್ತಲಿನಲ್ಲಿ ಸ್ವಚ್ಚವಾಗಿಟ್ಟುಕೊಂಡು ನಮ್ಮ ಆರೋಗ್ಯವನ್ನು ನಾವು ಕಾಪಾಡಿಕೊಳ್ಳಬೇಕು. ಅದೇ ರೀತಿ ಪ್ರಮುಖವಾಗಿ ಗರ್ಭಿಣಿ ಸ್ತ್ರೀಯರಿಗೆ ಸರಕಾರದಿಂದ ಸಿಗುವ ಉಚಿತ ಸೌಲಭ್ಯಗಳ ಬಗ್ಗೆ ಮಾಹಿತಿಯನ್ನು ನೀಡಿದರು.





ಈ ಕಾರ್ಯಕ್ರಮದ ಸಂದರ್ಭದಲ್ಲಿ ಶಿಶು ಅಭಿವೃದ್ಧಿ ಇಲಾಖೆಯ ಅಂಗನವಾಡಿ ಕೇಂದ್ರದ ಮೇಲ್ವಿಚಾರಕಿಯಾದ ಶ್ರೀಮತಿ ಸುಧಾ.ಕೆ. ಹಾಗೂ ಕಿರಿಯ ಆರೋಗ್ಯ ಕಾರ್ಯಕರ್ತೆಯಾದ ಕು.ರೇಖಾರವರು, ನೀತಿನಗರ ಅಂಗನವಾಡಿ ಕಾರ್ಯಕರ್ತೆ ಶ್ರೀಮತಿ.ವಿಜಯಲಕ್ಷ್ಮಿ ರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಹಾಗೂ ಸ್ಥಳೀಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಚೈಲ್ಡ್‌ಲೈನ್ ಮಂಗಳೂರು–1098 ತಂಡದ ಸದಸ್ಯರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಕಾರ್ಯಕ್ರಮದಲ್ಲಿ ದೂರವಾಣಿ ಕರೆ ಪ್ರಾತ್ಯಕ್ಷತೆಯನ್ನು ಚೈಲ್ಡ್‌ಲೈನ್ ಮಂಗಳೂರು–1098 ತಂಡ ಸದಸ್ಯರಾದ ಶ್ರೀಮತಿ.ರೇವತಿ ಹೊಸಬೆಟ್ಟು ಮತ್ತು ಪವಿತ್ರ ಜೋತಿಗುಡ್ಡೆಯವರು ನಡೆಸಿಕೊಟ್ಟರು. ಚೈಲ್ಡ್‌ಲೈನ್ ಮಂಗಳೂರು–1098 ತಂಡ ಸದಸ್ಯರಾದ ಶ್ರೀ.ಮತಿ ಆಶಾಲತ ವಂದಿಸಿ, ಅಂಗನವಾಡಿ ಕಾರ್ಯಕರ್ತೆ ಶ್ರೀಮತಿ.ಗಿರಿಜ ಸ್ವಾಗತಿಸಿ, ಚೈಲ್ಡ್‌ಲೈನ್ ಮಂಗಳೂರು–1098 ತಂಡ ಸದಸ್ಯೆ ಶ್ರೀಮತಿ.ಅಸುಂತ ಡಿ'ಸೋಜ ಕಾರ್ಯಕ್ರಮವನ್ನು ನಿರೂಪಿಸಿದರು.